# ರಸಾನುಭೂತಿ

ಜಗತ್ತಿನ ಬಹುಪಾಲು ಸಮುದಾಯಗಳಲ್ಲಿ ಗಂಡು ಹೆಣ್ಣುಗಳು ತಮ್ಮ ಬಾಳ ಸಂಗಾತಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುತ್ತವೆ. ಸಾಮಾನ್ಯವಾಗಿ ಈ ಬಗೆಯ ಆಯ್ಕೆ ಪ್ರೀತಿಯಿಂದುಂಟಾಗುವ ಮಧುರ ಕ್ರಿಯೆ. ಮದುವೆಯಾದ ಮೇಲೇ ಈ ಪ್ರೀತಿ ಬಂಧ ಜೀವನಪರ್ಯಂತ ಇರುತ್ತದೆಯೆಂದು ಹೇಳಲಾಗುವುದಿಲ್ಲ. ಪ್ರೀತಿ ಉಂಟಾಗುವ ಸಮಯದಲ್ಲಿ ವಯೋಸಹಜವಾದ ದೈಹಿಕ ಸೆಳೆತ, ಬಾಹ್ಯ ಆಕೃತಿಯ ಮೋಹ, ನಿಸರ್ಗದತ್ತವಾದ ಕಾಮವಾಂಛೆ- ಪ್ರಬಲವಾಗಿ ಕೆಲಸ ಮಾಡುತ್ತವೆ. ಒಂದು ಸೂರಿನಲ್ಲಿ ಬದುಕು ಆರಂಭಿಸಿದ ಮೇಲೆ ಸಂಗಾತಿಗಳ ಅಂತರಂಗ ಪ್ರಪಂಚ ಪದರ ಪದರವಾಗಿ ಅನಾವರಣವಾಗತೊಡಗುತ್ತದೆ. ಆಗ ಏಕ ಕಾಲದಲ್ಲಿ ಆಶ್ಚರ್ಯವೂ ಬೆರಗೂ ಕೋಪವೂ ಅಸಹ್ಯವೂ ಮೂಡಬಹುದು. ತಾವು ಕಾಣದ ಅಪರಿಚಿತ ವ್ಯಕ್ತಿತ್ವದ ವ್ಯಕ್ತಿಯೊಡನೆ ಬದುಕುವುದಕ್ಕಿಂತ ಬೇರೆಯಾಗುವುದು ಸರಿಯೆನ್ನಿಸಿ ಕಾನೂನಾತ್ಮಕವಾಗಿ ದೂರ ಸರಿಯುತ್ತಾರೆ.

ಎಲ್ಲ ಪ್ರೇಮ ಮದುವೆಗಳೂ ಹೀಗೇ ಇರುತ್ತವೆಯೆಂದು ಹೇಳಲಾಗುವುದಿಲ್ಲ. ಪ್ರೀತಿಸಿ ಮದುವೆಯಾಗಿ ಉಸಿರಿರುವವರೆಗೂ ಸಂಸಾರ ಮಾಡಿದವರು ಅಸಂಖ್ಯಾತ.

ಆದರೆ, ಭಾರತದಲ್ಲಿ ಇಂದಿಗೂ ಪ್ರೇಮವಿವಾಹಗಳು ಕಡಿಮೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಪ್ರತಿಶತ ಐದಕ್ಕಿಂತ ಕಡಿಮೆ. ಅಂದ ಮೇಲೆ ನಮ್ಮ ಸಮಾಜದಲ್ಲಿ ಹಿರಿಯರು ನೋಡಿ ಒಪ್ಪಿದ- ಆ ಕ್ಷಣದಲ್ಲಿ ತಾವೂ ನೋಡಿ ಒಪ್ಪಿದ- ಸಂಗಾತಿಯನ್ನೇ ಮದುವೆಯಾಗಿ ಜೀವನಪೂರ್ಣ ಬದುಕು ಸಾಗಿಸುವವರೇ ಅಧಿಕ ಎಂದಾಯ್ತು. ಸಂಗಾತಿ ಒಳ್ಳೆಯವ(ಳ)ನಿರಲಿ, ಕೆಟ್ಟವನಿ(ಳಿ)ರಲಿ ಅನುಸರಿಸಿಕೊಂಡು ಹೋಗುವ ಜಾಯಮಾನ ಭಾರತೀಯರದು.

ಈ ಹೊಂದಾಣಿಕೆಯ ಬದುಕಿಗೆ ಭಾರತೀಯ ವಧು- ವರರು ಮದುವೆಗೆ ಮುಂಚಿತವಾಗಿಯೇ ಮಾನಸಿಕವಾಗಿ ಸಿದ್ಧರಿರುತ್ತಾರೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯು ಸುಗುಣವಂತೆ, ಹೇಳಿಕೊಂಡು ಹೋಗುವ, ಮಕ್ಕಳನ್ನು ಹೆತ್ತು ಬೆಳೆಸುವ ಮತ್ತು ಪ್ರಶ್ನಿಸದ ಹೆಂಡತಿ ಸಿಗುವುದು 'ಭುವನದ ಭಾಗ್ಯ'ವೆಂದು ಪರಿಗಣಿಸಿತು; ನರಕ ಸದೃಶ ಗಂಡನ ಮನೆ ಸಿಕ್ಕರೆ ಅದು ತನ್ನ ಪೂರ್ವಜನ್ಮದ ಕರ್ಮವೆಂದು ಸ್ತ್ರೀ ಭಾವಿಸುವಂತೆ ಅವಳನ್ನು ಮಾನಸಿಕವಾಗಿ ಸಿದ್ಧಗೊಳಿಸಿತು.

ಸಂಸಾರವೆಂಬುದು ಎರಡು ಮೈಮನಸುಗಳ ಸಹಭಾಗಿತ್ವ. ಇದರಲ್ಲಿ ತಾಳ ತಪ್ಪಿದಾಗ ಅಸಹನೆ, ಕೋಪ ಸಹಜ. ಆಗ ಒಬ್ಬರ ಮೇಲೊಬ್ಬರು ಕಾಲು ಕೆರೆದು ಜಗಳವಾಡುವುದು, ಮನೆವಾರ್ತೆಯನ್ನು ಬೀದಿರಂಪ ಮಾಡುವುದು ಪ್ರಾರಂಭವಾಗುತ್ತದೆ. ಈ ರಂಪ ಕಿರಿದಾಗಿ, ಹಿರಿತೊರೆಯಾಗಿ ಬೆಳೆದು ಮಕ್ಕಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಬೆಳೆಯುವ ಮನಸ್ಸಿನ ಮೇಲೆ ವಿವಾಹ ವ್ಯವಸ್ಥೆಯ ಬಗ್ಗೆ ತುಚ್ಛಭಾವ ಮೂಡುವ ಸಾಧ್ಯತೆಯಿರುತ್ತದೆ. ಇಂಥ ಸಂದರ್ಭದಲ್ಲೇ ಪ್ರೀತಿ- ವಿವೇಕಗಳು ಮೂಡಬೇಕು. ಪ್ರತಿ ಮಾತು- ನಡತೆಯಲ್ಲಿ ತಾಳ್ಮೆ ಆಲೋಚನೆಗಳು ಉಸಿರಾಡಬೇಕು.

ಇಲ್ಲಿ ತಾಳ್ಮೆ ಅಸಹಾಯಕತೆಯಲ್ಲ; ಅದು ಸಂಗಾತಿಯನ್ನು ಅರ್ಥಮಾಡಿಕೊಳ್ಳುವ ಸಾಧನ.

ಭಾರತೀಯ ಸಮಾಜದಲ್ಲಿ ಜಾತಿ ಜಾತಿಗಳ ನಡುವೆ ಅಥವಾ ಒಂದೇ ಧರ್ಮದ ಭಿನ್ನ ಕುಟುಂಬಗಳ ನಡುವೆ ವಿವಾಹ ಸಂಬಂಧಗಳು ಏರ್ಪಟ್ಟರೂ ಬೆಳೆದ ಪರಿಸರ ಕಾರಣದಿಂದಾಗಿ ಭಿನ್ನ ಭಿನ್ನ ಅಭಿರುಚಿಗಳು ಮೂಡಿರುತ್ತವೆ. ಬದುಕನ್ನು ನೋಡುವ ದೃಷ್ಟಿ, ಆಹಾರ ಸಂಸ್ಕೃತಿ, ರುಚಿ ಸಂಸ್ಕೃತಿ ಮತ್ತು ವಸ್ತ್ರ ಸಂಸ್ಕೃತಿಗಳು ವ್ಯಕ್ತಿಗಳನ್ನು ಕುಟುಂಬದಿಂದ ಕುಟುಂಬಕ್ಕೆ ಬೇರೆ ಬೇರೆಯಾಗಿ ಬೆಳೆಸಿರುತ್ತವೆ. ಹೀಗೆ ಎರಡು ಭಿನ್ನ ಸಂಸ್ಕೃತಿಯಲ್ಲಿ ಬೆಳೆದ ಗಂಡು- ಹೆಣ್ಣುಗಳು ಬಾಳ ಸಂಗಾತಿಗಳಾದಾಗ ದೈಹಿಕ ಆಕರ್ಷಣೆಯೊಂದರ ಹೊರತಾಗಿ ಮಿಕ್ಕೆಲ್ಲ ಅಂಶಗಳು ಭಿನ್ನವಾಗಿ ದರ್ಶನವಾಗಿ, ಅಪರಿಚಿತವೆನ್ನಿಸಿ ಅಂತರ ಸೃಷ್ಟಿಯಾಗುತ್ತದೆ. ತನಗೆ ಇಷ್ಟವಿಲ್ಲದ ಅಥವಾ ಒಗ್ಗದ ಅಂಶಗಳ ಕಾರಣದಿಂದಾಗಿ ಅಸಹನೆ ಮೂಡುತ್ತದೆ; ದಾಂಪತ್ಯದಲ್ಲಿ ರಂಪ ಮೂಡುತ್ತದೆ.

ಆಗ ಸಂಗಾತಿಗಳಲ್ಲಿ ಸಹನೆ-ವಿವೇಕಗಳು ಕೆಲಸ ಮಾಡತೊಡಗಿದರೆ ಪರಿಸರ ಅರಿಯುವ-ಕಲಿಯುವ ಕ್ರಿಯೆ ಪ್ರಾರಂಭವಾಗುತ್ತದೆ. ಇಬ್ಬರು ಭಿನ್ನ ಮನಸ್ಸಿನ ಅಸಹನೆಯ ನಡುವೆ ಸೃಷ್ಟಿಯಾಗುವ ಜಗಳ ಬದುಕಿನ ಕಲಿಕೆಯ ಮಾಧ್ಯಮವಾಗಿರಬೇಕು. ಆಗ ಬಿಟ್ಟು ಪಡೆದುಕೊಳ್ಳುವ ಕ್ರಿಯೆ ಆರಂಭ.

ಅದನ್ನೇ ನಮ್ಮ ಜನಪದರು 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ'ವೆಂದು ಗುರುತಿಸಿದರು. ಗಂಡ ಹೆಂಡಿರ ಜಗಳ ಮೈ ಮುನಿಸುಗಳು ಅರ್ಥಮಾಡಿಕೊಳ್ಳುವ ಕ್ರಿಯೆಯ ಮಧುರ ಹೂವುಗಳಾಗಿ ಅರಳಬೇಕು. ಅದನ್ನೇ ಕವಿ ಬೇಂದ್ರೆ 'ಒಲವು' ಎಂದು ಸುಗಂಧಿಸಿದರು. ಬದುಕಿಗೆ ಒಂದು ಹೊಸ ಅರ್ಥ, ರಂಗು ಬರಬೇಕಾದರೆ 'ಸಮರಸವೇ ಜೀವನ'ವಾಗಬೇಕು ಎಂದು ಹೇಳಿರುವ ಅರ್ಥ ವೈಶಾಲ್ಯವೂ ಅದೇ ಆಗಿದೆ. ಬದುಕು ನವರಸಗಳ ವಿವೇಕಯುತ ಬಂಧುರವಾದಾಗ ಅಂತ್ಯದಲ್ಲಿ 'ಶಾಂತರಸ' ಮೂಡುತ್ತದೆ.

ಪ್ರತಿಯೊಂದು ವಿವಾಹದ ಅಂತಿಮ ಆಸೆ ಶಾಂತ ರಸಾನುಭೂತಿಯೇ ಆಗಬೇಕು. ಸಂಸಾರವೆಂಬುದು ನಿರಂತರ ಅರಿವಿನ ಕಲಿಕೆಯಾದಾಗ ಮಾತ್ರ ಅದು ಸಾಧ್ಯ.

**- ಶಿಕಾಕು**

## ಮಾತೇ ಮುತ್ತು

★ ಕೆಲವು ತಪ್ಪುಗಳಿಗಾಗಿ ನೈಜ ಸಂಬಂಧವನ್ನು ಕಳೆದುಕೊಳ್ಳಬೇಡ. ಯಾರೂ ಪರಿಪೂರ್ಣರಲ್ಲ. ಪರಿಪೂರ್ಣತೆಗಿಂತ ಪ್ರೀತಿ ದೊಡ್ಡದು.

-ಗೌತಮ ಬುದ್ಧ

★ ಯಾವುದೇ ಆರೋಗ್ಯವಂತ ಮನುಷ್ಯ ಆಹಾರ ಇಲ್ಲದೆ ಎರಡು ದಿನ ಬದುಕಬಲ್ಲ; ಆದರೆ ಕವಿತೆಗಳಿಲ್ಲದೆ ಬದುಕಲಾರ.

-ಚಾರ್ಲ್ಸ್ ಬೋದಿಲೇರ್

★ ಟನ್‌ಗಟ್ಟಳೆ ಉಪದೇಶಕ್ಕಿಂತ ಒಂದು ಔನ್ಸ್‌ನಷ್ಟು ಆಚರಣೆ ಒಳ್ಳೆಯದು.

-ಮಹಾತ್ಮ ಗಾಂಧಿ

★ ತತ್ವಜ್ಞಾನವೆಂದರೆ, ಊಟ ಮಾಡದಿದ್ದರೂ ಜೀರ್ಣವಾಗುತ್ತದೆ ಎಂದು ನಂಬುವ ಅಜ್ಞಾನಿಗಳ ಪುಕ್ಕಟೆ ಆಲೋಚನೆ.

—ಐರಿಸ್ ಮರ್ಡೋಕ್

★ ದೊರೆಗೆ ತನ್ನ ಭರವಸೆಗಳನ್ನು ಮುರಿಯಲು ಕಾನೂನಿನ ಕೊರತೆ ಕಾಡುವುದಿಲ್ಲ.

-ಮ್ಯಾಕಿವೆಲ್ಲಿ

★ ಮನುಷ್ಯ ಮಾಡುವ ಎಲ್ಲ ಕೆಲಸಗಳಿಗೂ ಆಸೆಯೇ ಮೂಲ.

-ಬರ್ಟ್ರೆಂಡ್ ರಸೆಲ್

★ ಮನುಷ್ಯನೆಂದರೆ ಮೂಲತಃ ಆಹಾರವನ್ನು ತುಂಬಿಸುವ ಒಂದು ಚೀಲ.

-ಜಾರ್ಜ್ ಆರ್ವೆಲ್

★ ಕಲೆ ಏನನ್ನೂ ಕಲಿಸುವುದಿಲ್ಲ— ಜೀವನದ ಮಹತ್ವವನ್ನು ಬಿಟ್ಟು.

—ಹೆನ್ರಿ ಮಿಲ್ಲರ್

★ ಅದೇ ಜನ ಅದೇ ಸ್ಥಳದಲ್ಲಿ ವಾಸಿಸುವುದಕ್ಕೆ ದೇಶ ಎನ್ನುತ್ತಾರೆ.

-ಜೇಮ್ಸ್ ಜಾಯ್ಸ್

★ ನಮ್ಮ ಜೀವನದ ಮುಕ್ಕಾಲು ಭಾಗವು ಕಲ್ಪನೆ ಮತ್ತು ಕಥೆಗಳಲ್ಲೇ ಕಳೆದುಹೋಗುತ್ತದೆ.

-ಸೈಮನ್ ವೀಲ್

★ ಯಶಸ್ಸಿನಿಂದ ಬಾಹ್ಯ ಸಂಪತ್ತನ್ನು ಗಳಿಸಬಹುದು. ಆದರೆ ಪ್ರೀತಿ ತಂದುಕೊಡುವ ಆಂತರಿಕ ಸಂಪತ್ತಿಗೆ ಅದು ಸಮನಲ್ಲ.

-ಸ್ಯಾಮುವೆಲ್ ಗೋಲ್ಡ್‌ವಿನ್

★ ಮನುಷ್ಯನಿಗೆ ಕಷ್ಟಗಳು ಬರಬೇಕು. ಅದು ಅವನ ಆರೋಗ್ಯಕ್ಕೆ ಒಳ್ಳೆಯದು.

—ಕಾರ್ಲ್ ಜಂಗ್